ಆ) ಒಂದು ಜೊತೆ ಸಮವಸ್ತ್ರ ಹೊಲಿಯಲು ತಗಲುವ ವೆಚ್ಚವೆಷ್ಟು ಹಾಗೂ ಸಮವಸ್ತ್ರಗಳನ್ನು ಯಾವ ಯಾವ ಸ್ಥಳಗಳಲ್ಲಿ ಹೊಲಿಸಲಾಗುತ್ತದೆ ?

ಇ) ಈ ಸಮವಸ್ತ್ರಗಳಿಗೆ ಕೇಂದ್ರ ಸರ್ಕಾರ ನೀಡುವ ಹಣವೆಷ್ಟು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು) —

ಅ) ೩೫,೧೬,೫೬೮ ಸಮವಸ್ತ್ರಗಳು, ೧೦೦೮.೬೮ ಲಕ್ಷ ರೂಪಾಯಿಗಳು.

ಆ)

ವಯಸ್ಸು	ಪ್ರತಿ ಜೊತೆಗೆ ಹೊಲಿಗೆ ವೆಚ್ಚ
ಬಾಲಕರು (೬–೮)	೬.೭೫
ಬಾಲಕಿಯರು (೬–೮)	೪. ೨೫
ಬಾಲಕಿಯರು (೮–೧೦) ಬಾಲಕಿಯರು (೧೦–೧೨)	೬. ೨೫

ಪೂರ್ಣ ಕಾರ್ಯ ವಿತರಣೆಯನ್ನು ಕೆ.ಸಿ.ಸಿ.ಎಫ್. – ಕೆ.ಹೆಚ್.ಡಿ.ಸಿ. ಸಂಸ್ಥೆಗಳಿಗೆ ವಹಿಸಲಾಗಿದೆ.

ಇ) ಯಾವುದೇ ಹಣ ನೀಡಿಲ್ಲ.

ದಿನಗೂಲಿ ಆಧಾರದ ಮೇರೆಗೆ ಕೆಲಸ ಮಾಡುತ್ತಿರುವ ನೌಕರರಿಗೆ ಸೌಲಭ್ಯಗಳು

೧೨೦ (೩೭೬ಎ) ಶ್ರೀ ಪಂಚಾಪತಿ (ದಾವಣಗೆರೆ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಲೋಕೋಪಯೋಗಿ ಇಲಾಖೆಯಲ್ಲಿ ದಿನಗೂಲಿ ಕೆಲಸಗಾರರಿಗೆ ಖಾಯಂ ಮಾಡಿ ರೂ. ೩೦೦–೦೦ ಸಂಬಳಗೊತ್ತುಪಡಿಸಲಾಗಿದ್ದು, ಇದರಿಂದ ಅವರಿಗೆ ಜೀವನ ಸಾಗಿಸುವುದು ಸಾಧ್ಯವಿಲ್ಲವಾದ್ದರಿಂದ ಅವರಿಗೆ ಸರ್ಕಾರಿ ನೌಕರರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನೊಳಗೊಂಡಂತೆ ಅನುಕೂಲ ವನ್ನು ಮಾಡಿಕೊಡುವ ನಿರ್ಧಾರ ಮಾಡಲಾಗಿದೆಯೇ ?

ಆ) ಸರ್ಕಾರದ ಆದೇಶದಂತೆ ದಿನಗೂಲಿ ಕಾರ್ಮಿಕರಿಗೆ ೩೦೦–೦೦ ರೂಪಾಯಿಗಳ ನಿಗದಿ ಮಾಡಿರುತಕ್ಕಂಥ ಲೋಕೋಪಯೋಗಿ ಇಲಾಖೆ ಕೆಲಸಗಾರರಿಗೆ ತುಟ್ಟಿಭತ್ಯೆಯನ್ನು ಕೊಟ್ಟಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮಾಸಿಕ ನಿಗದಿತ ವೇತನ ವ್ಯವಸ್ಥೆಯ ನೌಕರರು ತಮ್ಮನ್ನು ಖಾಯಂ ನೌಕರರೆಂದು ಪರಿಗಣಿಸಿ ತನ್ಮೂಲಕ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಬೇಕೆಂದು ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಈ ವಿಷಯವಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ಕಾಯಲಾಗಿದೆ.

ಆ) ಗಮನಕ್ಕೆ ಬಂದಿದೆ. ಮಾಸಿಕ ನಿಗದಿತ ವೇತನ ವ್ಯವಸ್ಥೆಯಲ್ಲಿ ತುಟ್ಟಿಭತ್ಯೆ ಕೊಡಲು ಅವಕಾಶವಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.